ಮನೆಗೆ ರಾತ್ರಿ ಅತ್ತೆ ಮಾವ ಬರುವವರಿದ್ದರು. ಇಂತಹ ಸಮಯದಲ್ಲಿ ಹೆಂಡತಿ ಸಡಗರದ ಅಡುಗೆ ತಯಾರಿಯಲ್ಲಿರುತ್ತಾಳೆ. ತವರೂರಿಗಂಟಿದ ಯಾವ ಜೀವ ಯಾವುದೇ ಕ್ಷಣದಲ್ಲಿ ಇಣುಕಿದರೂ ಪತ್ನಿಯ ಸಂಭ್ರಮ ಆಕಾಶದಗಲ. ಉಪ್ಪು, ಹುಳಿ, ಖಾರ, ತಯಾರಿ ಎಲ್ಲಾ ಪಕ್ಕಾ. ಅದೇ ನಮ್ಮ ಕಡೆಯವರು ಬಂದರೆ ಆ ಪರಿಯ ಉತ್ಕಟ ಸಂತಸಗಳು ಇರುವುದಿಲ್ಲ; ಒಂಥರ ಸೂತಕದ ಮೌನ. ರುಚಿ, ನಗು, ನಯ, ಕಾಳಜಿ ಒಂದಡಿ ಕಡಿಮೆನೇ ಇರುತ್ತೆ. ಇದು ನನ್ನೊಬ್ಬನ ಅನುಭವವೂ ಇರಬಹುದು. ಇಲ್ಲವೇ ಎಲ್ಲರ ಹಣೇಬರವೂ ಇದೇ ಆಗಿರಬಹುದು. ಈ ಘೋರ ಅನ್ಯಾಯವನ್ನು ಗಟ್ಟಿದನಿಯಲಿ ಹೆಂಡತಿಗೆ ಹೇಳಿಬಿಡುವ ಧೈರ್ಯ ಇನ್ನೂ ಹುಟ್ಟಿಲ್ಲ. ಆತಿಥ್ಯವನ್ನು ಅಳತೆ ಮಾಡಿ ಹೇಳುವ ಯಂತ್ರ ಬಂದಿದ್ದರೆ ಲೆಕ್ಕಚಾರ ಹಾಕಿ ಕೋರ್ಟಿಗೆ ಕೇಸ್ ಹಾಕಬಹುದಿತ್ತು.

ನಮ್ಮೋರು ಚೆಂದವ್ರೋ? ನಿಮ್ಮ ಕಡೆಯವರು ಅಂದವ್ರೋ ಎನ್ನುವ ಗಲಾಟೆ ಮನೆ ಎಂದ ಮೇಲೆ ಇದ್ದೇ ಇರುತ್ತೆ. ಸರಸ ದಾಂಪತ್ಯದಲ್ಲಿ ಇವೆಲ್ಲಾ ಇರಬೇಕು ಎಂದು ದೊಡ್ಡವರು ಹೇಳಿದ್ದಾರೆ. ಏಕೆಂದರೆ ಇದೊಂದು ಖರ್ಚಿಲ್ಲದ, ಯಾವ ಕಾಲಕ್ಕೂ ಮುಗಿಯದ ಜಗಳ. ಯಾವಾಗ ಬೇಕಾದರೂ ಆನ್ ಮಾಡಿಕೊಳ್ಳಬಹುದು. ಹೆಂಡತಿ ಕಡೆಯಿಂದ ಎಷ್ಟಾದರೂ ಉಚಿತವಾಗಿ ಉಗಿಸಿಕೊಳ್ಳಬಹುದು. ಸಾಕೆನಿಸಿದಾಗ ನೆವ ಹೇಳಿ ನಿಲ್ಲಿಸಬಹುದು. ಮತ್ತೊಂದು ದಿನ ಮುಂದುವರೆಸಬಹುದು. ಕೆಟ್ಟುಹೋದ ಲಟಾರಿ ಲಾರಿ ಇದ್ದಂತೆ. ಅಲ್ಲಲ್ಲಿ ರಿಪೇರಿ, ಆಗಾಗ ಪಯಣ. ಇಹದ ದಾರಿ ಮುಗಿಸುವ ತನಕ ನಿಲ್ಲದ ಹಾಡು. ನಡೀತಾನೆ ಇರಬೇಕು.

ಅಡಿಗೆ ಮನೆಯಿಂದ ಅವಳ ಗರಂ ದನಿ ಬಂತು, ''ಎಲ್ಲಾ ಆಗಿದೆ. ಚಿಕನ್ ಕಬಾಬ್ ಮರೆತು ಬಿಟ್ಟೆ. ಈಗ ತಂದು ಮಾಡೋವಷ್ಟು ಟೈಮಿದೆಯಾ'' ಎಂದಳು. ಇಂಥ ಸಮಯದಲ್ಲಿ ನನ್ನೊಳಗಿನ ಸೋಂಬೇರಿ ತಟತಟ ಜಾಗೃತನಾಗುತ್ತಾನೆ.

''ಕತ್ತಲಾಗುತ್ತಿದೆ. ಇಷ್ಟೊತ್ತಲ್ಲಿ ತಂದು ಮಾಡೋಕೆ ಟೈಮು ಹಿಡಿಯುತ್ತೆ. ಅದೊಂದು ಐಟಂ ಬಿಟ್ಟರೆ ಏನು ದೇಶ ಮುಳುಗೋಗುತ್ತಾ?'' ನನ್ನ ಬೆಂಕಿ ಹಚ್ಚುವ ಉತ್ತರ.

"ಸೈನ್ಸ್ ಮೈದಾನದ ಎದುರು ಕೆಂಡದಲ್ಲಿ ಕೋಳಿ ಸುಟ್ಟು ಕೊಡೊ ಅಂಗಡಿ ಇದೆ ಅಂತ ಮೊನ್ನೆ ನೀವೆ ಅಂದ್ರಲ್ಲ. ನಿಮ್ಮಕ್ಕ, ನಿಮ್ಮಣ್ಣ ಬಂದ್ರೆ ಅಲ್ಲಿಂದ ತರಬಹುದು ಅಂತ ಕುಣಿದಾಡಿದ್ರಲ್ಲ. ಈಗ ಅಲ್ಲೋಗಿ ತರೋಕೇನು ದೊಡ್ಡ ರೋಗ" ಎಂದಳು. 'ಬ್ಯಾಡದ ಹೊತ್ತಲ್ಲಿ ನೆಗೆದಾಡಿ ಕುಂಡಿ ಸಿಕ್ಕಿಸಿಕೊಳ್ಳುವ ನಿನ್ನಂಥ ಗಂಡಸಿನ ಹಣೇಬರವೇ ಇಷ್ಟು, ಅನುಭವಿಸು ಮಗನೇ!' ಎಂದು ನನ್ನ ಮನಸ್ಸು ಉಗಿಯಿತು.

ಹೇಳಬಾರದು ಅಂತ ಮನಸ್ಸಲ್ಲಿ ಅಂದ್ಕೊಂಡಿದ್ದರೂ ಹಾಳಾದ ಬಾಯಿ ಸುಮ್ಮನಿರಬೇಕಲ್ಲ. ಉತ್ತರ ಪೌರುಷದ ಕಾಯಿಲೆ. "ಅತ್ಯುತ್ಸಾಹದಲ್ಲಿ ಫಸ್ಟ್ ನೈಟಲ್ಲಿ ಎಲ್ಲಾ ಒದರಾಡಿ ಬಿಟ್ಟೆ, ಈಗ ನೋಡು ಪ್ರತಿ ನೈಟೂ ಅದರ ಎಫೆಕ್ಟು ಅನುಭವಿಸ್ತಾ ಇದ್ದೀನಿ. ಪ್ರಥಮ ರಾತ್ರಿ ಮಳ್ಳಿ ಬಾಯೇ ಬಿಡಲಿಲ್ಲ. ಮೂಕಿ ಥರ, ಮುಗ್ಧೆ ಸ್ಟೈಲಲ್ಲಿ ಕುಂತಿದ್ಲು. ಹೊಸ ಹಳಿ ಅಂತ ಯದ್ವಾತದ್ವಾ ರೈಲು ಬಿಟ್ಟೆ. ಎಲ್ಲಾ ಗುಮ್ಮನಗುಸ್ಕಿ ಹಂಗೆ ಕೇಳಿಸ್ಕೊಂಡಾಕೆ ಈಗ ಫುಲ್ ವಾಕಿಟಾಕಿ ಆಗ್ಯಾಳೆ. ಒಂದೊಂದು ಮಾತೂ ಮರೀದಂಗೆ ಸುಣ್ಣಬಣ್ಣ ಹಚ್ಚಿ ಜತನ ಮಾಡಿಟ್ಟುಕೊಂಡು ದಿನಾ ಜಡೀತಾಳೆ. ಬಾಯ್ಬಿಟ್ಟು ಭಂಡಗೇಡಿ ಆಗೇನಿ. ಯಾವ ಕಾರಣಕ್ಕೂ ನಮ್ನಮ್ ಸೀಕ್ರೆಟ್ ಬಿಟ್ಟುಕೊಡಬಾರದಣ್ಣ'' ಎನ್ನುವ ಗೆಳೆಯನ ಸಲಹೆ ನೆನಪಾಯಿತು. ನಾನಂತೂ ಈ ಯುದ್ಧವ ಗೆಲ್ಲಲಾರೆ. ''ಸೋತೇ ಉಫೀಟ್'' ಎಂದು ಬಿಡುವುದು ವಾಸಿ. ದುಸರಾ ಮಾತಿಲ್ಲದೆ ಆಯ್ತೆಂದು ಶರಣಾದೆ.

ಬೈಕ್ ಹತ್ತಿದಾಗ ಮೂರೂವರೆ ವಯಸ್ಸಿನ ಮಗಳು ಸೂಫಿ ನಾನು ಬರ್ತೀನಿ ಎಂದು ಹಟಕ್ಕೆ ನಿಂತಳು. ಮನೆಯಿಂದ ಸ್ಕೂಟರ್, ಬೈಕು ಚಾಲೂ ಆದರೆ ಸಾಕು ಮಕ್ಕಳು ಹೀಗೊಂದು ಜಾಲಿ ರೈಡ್ ಕೇಳುವ ದುರಭ್ಯಾಸ ಉಳಿಸಿಕೊಂಡಿರುತ್ತವೆ. ಅದಕ್ಕಿಂತ ಹೆಚ್ಚಾಗಿ ಈ ಚಟವನ್ನು ನಾವೇ ಕಲಿಸಿರುತ್ತೀವಿ.